ಹೋದ್ರು ಮತ್ತೊಮ್ಮಿ ಬರ್ತೀವಿ ಅಂದ್ರು. ಹೀಗ ಎರಡ್ಮೂರು ಸೆಶನ್ ಆದ್ವು. 1976ನೇ ಇಸ್ವಿಯಲ್ಲಿ ಸಂಗ್ರಹ ಮಾಡಿದ್ವಿ. ಆದ್ರ ಹಂಗ ಸಂಗ್ರಹ ಮಾಡಿದ್ದು ಏನಾಯ್ತೊ ನನ್ನ ಲಕ್ಷ್ಯಕ್ಕೂ ಬರಲಿಲ್ಲ. ಮುಂದ 1996ರಲ್ಲಿ ನಾನು ಜಾನಪದ ಅಕಾಡೆಮಿ ಸದಸ್ಯನಾದೆ. ಎಚ್.ಜೆ. ಲಕ್ಕಪ್ಪಗೌಡ್ರು ಅಧ್ಯಕ್ಷರಾಗಿದ್ರು. ಅವರಿಗಿ ಈ ಮಹಾಕಾವ್ಯದ ಬಗ್ಗೆ ತಿಳಿಸಿದೆ. ಅವರು ಮಾಡ್ರಿ ದಂಡೆಯವರೆ ಅಂದ್ರು. ಚಾಲೂ ಮಾಡ್ದೆ. ಅಪ್ಪಾಸಾಬ್ ಸಂಶೋಧನ ಸಹಾಯಕನಾಗಿ ದುಡಿದ. ಕೊನಿಗಿ ಅವರ ಊರಿಗೆ ಹೋಗಿ ಸಂಗ್ರಹ ಮಾಡೋ ಪರಿಸ್ಥಿತಿ ಬಂತು. ಅಪ್ಪಾಸಾಬ ಅಲ್ಲಿಗೆ ಹೋಗಿ ಸಂಗ್ರಹ ಮಾಡಿದ. ಸಿದ್ದಪ್ಪ ಮೇಟಿ ಭಾಳ ಒಳ್ಳೆಯ ವ್ಯಕ್ತಿ. ಆರು ತಿಂಗಳು ಹಾಡಿದ್ರು. ಒಟ್ಟು ಎಪ್ಪತ್ತಾರು ಗಂಟೆ ರೆಕಾರ್ಡ್ ಮಾಡಿದ್ವಿ. ಆದ್ರ ಕಥೆ ಗೊತ್ತೆ ಆಗಲಿಲ್ಲ. ಕೊನೆಗೆ ಸಿದ್ದಪ್ಪಗೆ ಕರೆಸಿದ್ವಿ. ಈಗ ಹಾಡು ಬ್ಯಾಡ. ಬರೀ ಕಥಿ ಹೇಳು ಅಂದ್ವಿ. ಅವನು ಒಂದು ತಾಸೊ ಎರಡ ತಾಸೊ ಕಥಿ ಹೇಳ್ತಾನ ಅಂದ್ರ ಅವ ಬರೋಬ್ಬರಿ ಏಳು ತಾಸ ಬರೀ ಕಥಿನೆ ಹೇಳ್ದ. ಇನ್ನ ಅಂವ ಹೇಳಿದ ಕಥಿ ಮಹಾಕಾವ್ಯದೊಳಗ ಹುಡುಕಬೇಕಲ್ಲ. ಅದು ಇನ್ನೊಂದು ದೊಡ್ಡ ಸಾಹಸ. ಎಲ್ಲಾ ಕೆಲಸ ಮುಗೀಲಿಕ್ಕ ಐದು ವರ್ಷ ಬೇಕಾಯ್ತು. ಕುರುಬ ಸಮಾಜದ ಒಂದು ದೊಡ್ಡ ಸಾಂಸ್ಕೃತಿಕ ಗುರುತು ಇದರಿಂದ ಲಭ್ಯವಾಯಿತು. ಕುರುಬ ಸಮಾಜಕ್ಕೆ ಒಂದು ದೊಡ್ಡ ಆಧಾರ ಗ್ರಂಥ ಲಭಿಸಿತು. ಆದರೆ, ಇದು ಬರೀ ಕುರುಬರಿಗೆ ಸಂಬಂಧಪಟ್ಟ ಕೃತಿಯಲ್ಲ, ಶೈವ ಸಂಪ್ರದಾಯದ ಒಂದು ದೊಡ್ಡ ಧಾರ್ಮಿಕ ಗ್ರಂಥ. ಸಾಮಾನ್ಯರಲ್ಲಿ ಶೈವಧರ್ಮದ ಪರಿಕಲ್ಪನೆ ಏನಿತ್ತು ಅದನ್ನ ಹೇಳುವ ಕೃತಿಯಿದು. ಬೀರಪ್ಪ ಗುರು, ಮಾಳಿಂಗರಾಯ ಶಿಷ್ಯ ಮತ್ತು ಖ್ಯಾಮಣ್ಣ ಭಕ್ತ. ಗುರು ದೇವರಿಗೆ ಸಮಾನ, ಗುರುವಿನ ಸ್ವರೂಪ ಶಿಷ್ಯನಲ್ಲಿರುವದು, ಭಕ್ತ ಶಿಷ್ಯನ ಹತ್ತಿರ ಹೋಗಬೇಕು. ಬಸವಣ್ಣನವರು ಏನು ಮಾಡಿದ್ರು ಅಂತಂದ್ರೆ ದೇವರು ಮತ್ತು ಭಕ್ತರ ನಡುವಿನ ಪೂಜಾರಿಯನ್ನು ತೆಗೆದುಹಾಕಿದ್ರು. ಅಂದ್ರೆ ಈ ಶಿಷ್ಯನನ್ನು. ಹೀಗಾಗಿ, ಬಸವಣ್ಣನವರ ಅಪೇಕ್ಷೆ ಏನೆಂದರೆ ಶೈವಧರ್ಮವನ್ನು ಸುಧಾರಿಸುವುದು. ಬ್ರಾಹ್ಮಣರ ಆಚರಣೆಗಳ ಬಗ್ಗೆ ಅವರಿಗೆ ಅಷ್ಟು ಆಸಕ್ತಿ ಇರಲಿಲ್ಲ. ಆದರೆ, ಶೈವಧರ್ಮದ ಆಚರಣೆಗಳ



ವೀರಣ್ಣ ದಂಡೆ ಅವರೊಂದಿಗೆ ಸಂದರ್ಶಕ ವಿಕ್ರಂ ವಿಸಾಜಿ